(ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಜೆ.ಸಿ. ಮಧುಸ್ವಾಮಿ : 165 ಸುತ್ತೋಲೆಯನ್ನು ತಾವು ಕನ್ನಡದ ಬಗ್ಗೆ ಕೊಟ್ಟಿರುವುದು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ : ಈ ವಿಷಯವನ್ನು ಮಾನ್ಯ ವಾಟಾಳ್ ನಾಗರಾಜ್ ಅವರು ರಾಜಕೀಯಕ್ಕೆ ಉಪಯೋಗಿಸುತ್ತಿದ್ದಾರೆ. ಇದು ಸರಿಯಲ್ಲ ಎಂದು ಮಾತ್ರ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಅಧ್ಯಕ್ಷರು : ಈಗ ಸದನದಲ್ಲಿ ಕನ್ನಡದ ಬಗ್ಗೆ ಎಲ್ಲರೂ ಅಭಿಮಾನ ಪಟ್ಟು ಮಾತನಾಡಿದರು. ನನ್ನ ಮನಸ್ಸಿಗೆ ಸ್ವಲ್ಪ ಏನು ಅನಿಸಿತು ಎಂದರೆ ನಮ್ಮ ಸಾರ್ವಜನಿಕ ಲೆಕ್ಕ ಪತ್ರ ಮತ್ತು ಸಾರ್ವಜನಿಕ ಉದ್ದಿಮೆಗಳ ಸಮಿತಿಗಳ ವರದಿ ಪ್ರತಿಯನ್ನು ಹರಿದಿದ್ದು ನನಗೆ ಅಷ್ಟೇನೂ ಸರಿ ಎನಿಸಲಿಲ್ಲ. ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಎರಡು ಸಮಿತಿಗಳನ್ನು ಬಿಟ್ಟು ಉಳಿದೆಲ್ಲ ಸಮಿತಿಗಳ ವ್ಯವಹಾರವನ್ನು ನಾವು ಕನ್ನಡದಲ್ಲಿ ಮಾಡುತ್ತಿದ್ದೇವೆ. ಇನ್ನು ಮುಂದೆ ಇವು ಎಂದು ಸಹ ಕನ್ನಡದಲ್ಲಿ ಮಾಡಲಿಕ್ಕೆ ಅನುಕೂಲತೆ ಮಾಡಬಹುದು.

ಶ್ರೀ ಹೆಚ್. ವಿಶ್ವನಾಥಯ್ಯ : ಮಾನ್ಯ ಅಧ್ಯಕ್ಷರೆ, ನನಗೆ ಅನುಮತಿ ಕೊಡಬೇಕು. ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಅಧ್ಯಕ್ಷನಾಗಿ ನಾನು ಹೇಳುತ್ತಿದ್ದೇನೆ. ಎಲ್ಲಿಯವರೆಗೆ ನೀವು ಸಿ ಅಂಡ್ ಎಜಿ ರಿಪೋರ್ಟ್‌ನ್ನು ಕನ್ನಡದಲ್ಲಿ ಇರುವುದಿಲ್ಲ, ಅಲ್ಲಿಯವರೆಗೆ ಅದು ಸಾಧ್ಯ ಆಗುವುದಿಲ್ಲ. ಅಭಿವೃದ್ಧಿ ಪ್ರಾಧಿಕಾರ ಮತ್ತು ಸಿ ಅಂಡ್ ಎಜಿ ಅವರು ಏನು ರಿಪೋರ್ಟ್ ಕೊಡುತ್ತಿದ್ದಾರೆ ಅವನ್ನು ಕನ್ನಡದಲ್ಲಿ ತರ್ಜುಮೆ ಮಾಡಿ ಈ ಮನೆಯ ಮುಂದೆ ಇಡುವ ಹಾಗೆ ಮಾಡಿ. ತದನಂತರ ಇದನ್ನು ಹೇಳುವುದರಲ್ಲಿ ಅರ್ಥ ಎಂಬುದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು : ನಾನು ಅದಕ್ಕೆ ಅವಕಾಶ ಅನುಕೂಲತೆಗಳನ್ನು ಮಾಡಿಕೊಡುತ್ತೇನೆ.

ಗಮನ ಸೆಳೆಯುವ ಸೂಚನೆಗಳು

ಕೈಮಗ್ಗ ನಿಗಮದಲ್ಲಿ ಕೆಲಸ ಮಾಡುವ ನೇಕಾರರಿಗೆ ನೂಲು ಮತ್ತು ಆರ್ಥಿಕ ನೆರವು ಸಿಗದೆ ತೊಂದರೆಯಾಗಿರುವುದರ ಬಗ್ಗೆ

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಕೈಮಗ್ಗ ನಿಗಮದಲ್ಲಿ ಕೆಲಸ ಮಾಡುವ ನೇಕಾರರಿಗೆ ನೂಲು ಮತ್ತು ಆರ್ಥಿಕ ನೆರವು ಸಿಗದೇ ಕಷ್ಟವಾಗಿರುವುದನ್ನು ಮಾನ್ಯ ಜವಳಿ ಖಾತೆಯ ರಾಜ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಜವಳಿ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತೇನೆ :

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಬಳಿ ಉತ್ಪಾದಿತ ಬಟ್ಟೆಯ ದಾಸ್ತಾನು ಶೇಖರಣೆಯಾದ ಕಾರಣ ನಿಗಮವು ತೀವ್ರ ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿ ಎದುರಿಸುತ್ತಿದೆ. ಇದರಿಂದಾಗಿ ನಿಗಮವು ಸಕಾಲದಲ್ಲಿ ಹಣ ಪಾವತಿ ಮಾಡದ ಕಾರಣ ನೂಲು ಸರಬರಾಜಿನಲ್ಲಿ ಅಡಚಣೆ ಉಂಟಾಗಿರುತ್ತದೆ.

ಜನವರಿ 94ರಿಂದ ಹತ್ತಿ ಬೆಲೆಯಲ್ಲಿ ತೀವ್ರ ಹೆಚ್ಚಳ ಉಂಟಾಗಿ ನೂಲಿನ ಬೆಲೆಯಲ್ಲಿ ಪ್ರತಿ ಶತ 20 ರಿಂದ 40 ರಷ್ಟು ಹೆಚ್ಚಳ ಆಗಿದೆ.

ಕಳೆದ ವರ್ಷದ ನವೆಂಬರ್ ತಿಂಗಳಿನಲ್ಲಿ ಕೈಮಗ್ಗ ಅಭಿವೃದ್ಧಿ ನಿಗಮದ ನೇಕಾರರಿಗೆ ಪೂರೈಸಲು ಒಟ್ಟು 6.83 ಲಕ್ಷ ಕೆ.ಜಿ, ಡಿಸೆಂಬರ್ ತಿಂಗಳಿನಲ್ಲಿ 6.82 ಮತ್ತು ಜನವರಿ ತಿಂಗಳಿನಲ್ಲಿ 6.83 ಲಕ್ಷ ಕೆ.ಜಿ.ಯಷ್ಟು ನೂಲಿನ ಅಗತ್ಯವಿತ್ತು. ಆದರೆ ಈ ಪೈಕಿ ಕೇವಲ 3.20 ಲಕ್ಷ, 3.99 ಲಕ್ಷ 1.00 ಲಕ್ಷ ಕೆ.ಜಿ.ಯಷ್ಟು ನೂಲನ್ನು ಮಾತ್ರ ಪೂರೈಕೆ ಮಾಡಲಾಗಿದೆ.

ಫೆಬ್ರವರಿ ತಿಂಗಳ ಒಟ್ಟು ನೂಲಿನ ಅಗತ್ಯ ಪೂರೈಸಲು ಈಗಾಗಲೇ 2.25 ಲಕ್ಷ ಕೆ.ಜಿ. ನೂಲನ್ನು ಖರೀದಿಸಲು ಆದೇಶ ನೀಡಲಾಗಿದೆ.

ಕೈಮಗ್ಗ ಅಭಿವೃದ್ಧಿ ನಿಗಮದ ಬಳಿ ಇರುವ ದಾಸ್ತಾನನ್ನು ಮಾರಾಟ ಮಾಡಲು ಅಗತ್ಯದ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಈರೋಡಿನ ಬಟ್ಟೆ ಸಂತೆಯಲ್ಲಿ ಈ ಬಟ್ಟೆ ಮಾರಾಟ ಮಾಡಲು ಪ್ರಯತ್ನಿಸಲಾಗುತ್ತಿದೆ. ಈಗಾಗಲೇ ತಮಿಳುನಾಡಿಗೆ 5 ಕೋಟಿ ರೂಪಾಯಿಯ ಜನತಾ ಬಟ್ಟೆಯನ್ನು ಮಾರಾಟ ಮಾಡಿದ್ದು ಈ ಹಣ ಏಪ್ರಿಲ್ ತಿಂಗಳ ವೇಳೆಗೆ ನಿಗಮಕ್ಕೆ ಸಂದಾಯವಾಗಲಿದೆ. ಈ ಹಂತದಲ್ಲಿ ಬ್ಯಾಂಕುಗಳ ಮೂಲಕ ಬಿಲ್ ಡಿಸ್ಕಾಂಟಿಂಗ್ ಪದ್ಧತಿ ಅಳವಡಿಸಿಕೊಂಡು ಹಣದ ವ್ಯವಸ್ಥೆ ಮಾಡಿ ನೂಲು ಖರೀದಿಗೆ ಪ್ರಯತ್ನಿಸಲಾಗುತ್ತಿದೆ.

ರಾಜ್ಯದ ಸಹಕಾರಿ ನೂಲಿನ ಗಿರಣಿಗಳ ಮೂಲಕ ನೂಲು ಖರೀದಿಸಲು ಮತ್ತು ಪೂರೈಕೆಯನ್ನು ಸತತವಾಗಿ ಮಾಡಲು ಅಗತ್ಯದ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಕುರಿತು ಜವಳಿ ಆಯುಕ್ತರು ದಿನಾಂಕ 8-2-94ರಂದು ಸಭೆ ನಡೆಸಿದ್ದಾರೆ. ಸದ್ಯ ನೇಕಾರರಿಗೆ ಕೂಲಿ ಕೊಡದಿರುವ ಪ್ರಸಂಗಗಳಿಲ್ಲ. ನೇಕಾರರಿಗೆ ಮಜೂರಿ ಮತ್ತು ಸಂಪೂರ್ಣವಾಗಿ ಬಿಡುಗಡೆ ಮಾಡಲಾಗಿದೆ. ಕಚ್ಚಾ ಮಾಲು ಸರಿಯಾಗಿ ಪೂರೈಸುವಂತೆ ಸರ್ಕಾರ ನಿಗಮಕ್ಕೆ ನಿರ್ದೇಶನ ಸಹ ನೀಡಿದೆ. ನೇಕಾರರಿಗೆ ಕಚ್ಚಾ ಮಾಲು ಪೂರೈಕೆ ಮಾಡುವಲ್ಲಿ ಆಗಿರುವ ತೊಂದರೆ ಪರಿಹರಿಸುವಲ್ಲಿ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

11.30 ಎ.ಎಂ

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಒಂದು ಮಾತನ್ನು ಒಪ್ಪಿಕೊಂಡಿದ್ದಾರೆ. ಏನೆಂದರೆ, ನೇಕಾರರಿಗೆ ಎಷ್ಟು ಪ್ರಮಾಣದಲ್ಲಿ ನೂಲನ್ನು ಪೂರೈಕೆ ಮಾಡಬೇಕಾಗಿತ್ತೋ ಅಷ್ಟನ್ನು ಪೂರೈಕೆ ಮಾಡುವುದಕ್ಕಾಗಿಲ್ಲವೆಂದು. ಅದಕ್ಕೆ ಮುಖ್ಯವಾದ ಕಾರಣ, ಸರ್ಕಾರದಿಂದ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಏನು ಹಣ ಬಿಡುಗಡೆ ಆಗಬೇಕಾಗಿತ್ತು, ಆ ಹಣ ಇನ್ನೂ ಬಿಡುಗಡೆಯಾಗಿಲ್ಲ. ಅಲ್ಲದೆ, ಕೇಂದ್ರ ಸರ್ಕಾರದಿಂದ ಏನು ಆರ್ಥಿಕ ನೆರವು ಬರುತ್ತದೆ, ಅದನ್ನೂ ಸಹ ತಾವು ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ಬಿಡುಗಡೆ ಮಾಡಿಲ್ಲದಿರುವುದರಿಂದ ನಿಗಮದ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿದೆ. ಆದುದರಿಂದ, ಹಣ ಬಿಡುಗಡೆ ಮಾಡುವ ವ್ಯವಸ್ಥೆ ಮಾಡಬೇಕು. ಈ ವ್ಯವಸ್ಥೆಯಾದರೆ ನಿಗಮಕ್ಕೆ ಆರ್ಥಿಕ ನೆರವು ಕೊಡುವುದಕ್ಕೆ ಸಾಧ್ಯವಾಗುತ್ತದೆ ಮತ್ತು ನೇಕಾರರಿಗೆ ಕಚ್ಚಾ ನೂಲನ್ನು ಸರಬರಾಜು ಮಾಡುವುದಕ್ಕೂ ಸಾಧ್ಯವಾಗುತ್ತದೆ. ನನಗೆ ಗೊತ್ತಿರುವಂತೆ, ಅನೇಕ ಕಡೆಗಳಲ್ಲಿ ನೇಕಾರರು ಇವ್ವೊತ್ತು ಮುಷ್ಕರ ಹೂಡುತ್ತಿದ್ದಾರೆ. ಮಾನ್ಯ ಸಚಿವರು ಅದರ ಬಗ್ಗೆ ಮಾತನಾಡಿ ಕೆಲವು ಕಡೆ ಅವರ ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನ ಮಾಡಿದ್ದಾರೆ. ಅದನ್ನು ನಾನು ಮೆಚ್ಚುತ್ತೇನೆ. ಆದರೂ ಸಹ ತಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಸರ್ಕಾರಕ್ಕೆ ಆರ್ಥಿಕವಾಗಿ ತೊಂದರೆ ಇದೆ, ಅದರಿಂದ ಎಲ್ಲಾ ನಿಗಮಗಳು ಕಷ್ಟ ಅನುಭವಿಸುತ್ತಿದೆ. ಅದರಲ್ಲಿ ಕೈಮಗ್ಗ ಅಭಿವೃದ್ಧಿ ನಿಗಮವೂ ಒಂದೊಂದು ನಾನು ಸೂಚಿಸುತ್ತೇನೆ. ಆದಕಾರಣ, ತಾವು ತಕ್ಷಣ ಸರ್ಕಾರದಿಂದ ಹಣ ಬಿಡುಗಡೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತು ಯಾರಿಗೂ ಆರ್ಥಿಕ ನೆರವು ಕೊಡುವುದು ಬಾಕಿ ಇರುವುದಿಲ್ಲವೆಂದು ತಾವು

ಹೇಳಿದ್ದೀರಿ. ಇವೊತ್ತು ನೇಕಾರರ ಹಣ ನಿಮ್ಮ ಹತ್ತಿರ ಅಂದರೆ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ಜಮಾ ಆಗಿದೆ, ಆ ರೀತಿ ಜಮೆಯಾಗಿರುವ ಹಣವೂ ಅವರಿಗೆ ಸಿಗುತ್ತಿಲ್ಲ. ಎಲ್ಲೆಲ್ಲಿ ಹಣ ಪಾವತಿಯಾಗಬೇಕೋ, ಅಲ್ಲಿಗೆ ಸರ್ಕಾರದಿಂದ ತಕ್ಷಣ ಹಣ ಬಿಡುಗಡೆ ಆಗುವಂತೆ ತಾವು ವ್ಯವಸ್ಥೆ ಮಾಡಬೇಕೆಂದು ತಮ್ಮನ್ನು ಒತ್ತಾಯಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಿಗೆ ತಿಳಿದಿರುವಂತೆ ಬನಹಟ್ಟಿಯಲ್ಲಿ ಆಕಾಶ್ ಸಾಹೇಬ್ ಎನ್ನುವವರು ಮತ್ತು ಕೊಪ್ಪಳದಲ್ಲಿ ವಿಠ್ಠಪ್ಪ ಎನ್ನುವವರು ಅಮರಣಾಂತ ಉಪವಾಸ ಸತ್ಯಾಗ್ರಹ ಕುಳಿತಿದ್ದರು. ಅವರುಗಳು ಉಪವಾಸ ಮಾಡಲು ಮುಖ್ಯವಾದ ಉದ್ದೇಶವೆಂದರೆ, ಇವೊತ್ತು ನೇಕಾರರಿಗೆ ಕಚ್ಚಾ ಮಾಲು ಸಿಗುತ್ತಿಲ್ಲ. ಅದನ್ನು ಖರೀದಿಸಲು ಕೈಮಗ್ಗ ಅಭಿವೃದ್ಧಿ ನಿಗಮ ಹಣಕಾಸಿನ ಮುಗ್ಗಟ್ಟು ಎದುರಿಸುತ್ತಿದೆ. ಇದರಿಂದಾಗಿ ಇವೊತ್ತು ನೇಕಾರರೆಲ್ಲರೂ ನಿರುದ್ಯೋಗಿಗಳಾಗಿದ್ದಾರೆ. ಕೊಪ್ಪಳದಲ್ಲಿ ಸುಮಾರು 10 ಸಾವಿರ ಜನ ಮತ್ತು ಬಿಜಾಪುರದಲ್ಲಿ 20 ಸಾವಿರ ಜನ ನೇಕಾರರು ಬೀದಿ ಪಾಲಾಗಿದ್ದಾರೆ. ಈ ಸಂಗತಿ ತಮಗೆ ಗೊತ್ತಿದೆ. ತಾವು ಅಲ್ಲಿಗೆ ಭೇಟಿ ಕೊಟ್ಟು ಅವರ ಸಮಸ್ಯೆಗಳೇನೆಂಬುದನ್ನು ತಿಳಿದು ಅದನ್ನು ಪರಿಹರಿಸುವುದಕ್ಕೆ ತಾವು ಶಕ್ತಿ ಮೀರಿ ಪ್ರಯತ್ನಿಸಿದಿರಿ. ಆದರೂ ಸಹ ಇವೊತ್ತಿನ ತನಕವೂ ಅವರಿಗೆ ಯಾವುದೇ ಕಚ್ಚಾಮಾಲು ಸಿಗುತ್ತಿಲ್ಲ. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ಏನಿದೆ, ಅದರಿಂದ ಹೆಚ್ಚು ಅನುಕೂಲ ಇವರಿಗೆ ಆಗುತ್ತಿಲ್ಲ. ಆದುದರಿಂದ, ಕಚ್ಚಾಮಾಲನ್ನು ಪೂರೈಸಿ ನೇಕಾರರ ಬದುಕಿಗೆ ತೊಂದರೆಯಾಗದಂತೆ ಯಾವ ರೀತಿ ಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೆ, ನೇಕಾರರಿಗೆ ನೂಲನ್ನು ಪೂರೈಸುವುದಕ್ಕೆ ಸಾಧ್ಯವಾಗಿಲ್ಲವೆಂದು ಸರ್ಕಾರದ ಪರವಾಗಿ ಮಂತ್ರಿಗಳೇ ಒಪ್ಪಿಕೊಂಡಿದ್ದಾರೆ. ನೇಕಾರರಿಗೆ ಸೂಕ್ತ ತರಬೇತಿ ಕೊಟ್ಟು, ಪ್ರೋತ್ಸಾಹ ನೀಡಿ ಸ್ವಯಂ ಉದ್ಯೋಗ ಕಲ್ಪಿಸಿಕೊಡುವುದಕ್ಕೋಸ್ಕರ ಈ ಯೋಜನೆ ಹಮ್ಮಿಕೊಳ್ಳಲಾಗಿದೆಯೆಂದು ಸರ್ಕಾರ ಒಂದು ಕಡೆ ಹೇಳುತ್ತದೆ. ಆದರೆ, ಈಗ ನೇಕಾರರಿಗೆ ನೂಲನ್ನು ಒದಗಿಸಿಕೊಡುವುದಕ್ಕೆ ಇನ್ನೂ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಮಂತ್ರಿಗಳು ಪ್ರಯತ್ನಿಸಬಹುದು. ನಿಗಮಕ್ಕೆ ಸರ್ಕಾರ ಹಣ ಕೊಡದೆ ಇದ್ದಾರೆ ನಿಗಮವಾದರೂ ಹೇಗೆ ಉದ್ಧಾರವಾಗಬೇಕು? ಈಗ ಒಂದು ಲಡಿಗೆ ನಾಲ್ಕೂವರೆ ರೂಪಾಯಿಗಳೆಂದು ನೇಕಾರರಿಗೆ ಕೊಡುತ್ತಿದ್ದು ಅದಕ್ಕೆ ಬದಲಾಗಿ ಆರು ರೂಪಾಯಿಗಳನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ಈಗ ಬೆಲೆ ಏರಿಕೆಯಾಗಿದೆ. ಈ ಕುರಿತು ಅವರು ರಾಣೆಬೆನ್ನೂರು ತಾಲ್ಲೂಕಿನ ತುಮಿನಕಟ್ಟೆಯಲ್ಲಿ ಹಾಗೂ ಬನಹಟ್ಟಿಯಲ್ಲಿ ಉಪವಾಸ ಸತ್ಯಾಗ್ರಹ, ಧರಣಿ ಮುಂತಾದವುಗಳನ್ನು ಮಾಡುತ್ತಿದ್ದಾರೆ. ದುಡಿಯತಕ್ಕಂಥ ಮನುಷ್ಯನ ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಸರ್ಕಾರ ಕೊಡದೆ ಹೋದರೆ ನಿರುದ್ಯೋಗ ಇನ್ನೂ ಹೆಚ್ಚಾಗುತ್ತದೆ. ಆದುದರಿಂದ, ಕೂಡಲೇ ಅವರಿಗೆ ಕಚ್ಚಾಮಾಲನ್ನು ಒದಗಿಸಿಕೊಡುವ ವ್ಯವಸ್ಥೆಯಾಗಬೇಕು ಮತ್ತು ಅವರ ಬೇಡಿಕೆ ಪ್ರಕಾರ ಅವರಿಗೆ ಒಳ್ಳೆಯ ಕೂಲಿಯನ್ನು ಸರ್ಕಾರ ಕೊಡಬೇಕು. ತಮ್ಮ ಉತ್ತರದಲ್ಲಿ 'ಮಾಡಲಾಗುವುದು''ಆದೇಶಿಸಲಾಗಿದೆ' ಎಂದು ತಿಳಿಸಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಆದುದರಿಂದ, ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಅವರಿಗೆ ಅವಶ್ಯಕತೆ ಇರತಕ್ಕ ನೂಲನ್ನು ಪೂರ್ಣವಾಗಿ ನೀವು ಯಾವಾಗ ಪೂರೈಕೆ ಮಾಡುತ್ತೀರಿ? ಅವರ ಬೇಡಿಕೆ ಪ್ರಕಾರ ಕೂಲಿಯನ್ನು ಪೂರ್ಣವಾಗಿ ಕೊಡುವುದಕ್ಕೆ ಸರ್ಕಾರ ಇವತ್ತು ಒಪ್ಪಿಕೊಳ್ಳಬೇಕು. ಆ ಕೂಲಿಕಾರರ ಶ್ರಮಕ್ಕೆ ತಕ್ಕಂತೆ, ಅವರಿಗೆ ಎಲ್ಲಾ ಸವಲತ್ತುಗಳನ್ನು ಒದಗಿಸಿ ಅವರಿಗೆ ಸಿಗತಕ್ಕ ಸಂಬಳವನ್ನು ಕೊಡಲಿಕ್ಕೆ, ಕೂಲಿಯನ್ನು ಕೊಡಲಿಕ್ಕೆ ಸರ್ಕಾರ ಬದ್ಧವಾಗಿದೆ ಎಂದು ನೀವು ಹೇಳಬೇಕು. ಇಲ್ಲದೆ

ಹೋದರೆ ಬಡವರು ಸಿಟ್ಟುಗೊಂಡು ಈಗಾಗಲೇ ಧರಣಿ ಸತ್ಯಾಗ್ರಹ, ಉಪವಾಸ ಮಾಡುತ್ತಿದ್ದಾರೆ. ದುಡಿಯುವವರಿಗೆ ಹೊಟ್ಟೆಗೆ ಇಲ್ಲ.

ಅಧ್ಯಕ್ಷರು : ಏನು ಮಾಡಬೇಕು ಹೇಳಿ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಸರ್ಕಾರ ಕೂಡಲೇ ನಿರ್ದಿಷ್ಟ ವೇಳೆಯಲ್ಲಿ ಅವರ ಬೇಡಿಕೆಯನ್ನು ಪೂರೈಕೆ ಮಾಡಬೇಕೆಂದು ತಮ್ಮ ಮೂಲಕ ಅವರನ್ನು ಕೇಳುತ್ತಿದ್ದೇನೆ.

ಅಧ್ಯಕ್ಷರು : ಕಾಲಿಂಗ್ ಅಟೆನ್ಷನ್ ಮೇಲೆ ಎಲ್ಲರೂ ಮಾತನಾಡಿದರೆ ಹೇಗೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ಉಪವಾಸ ಮಾಡುತ್ತಿದ್ದಾರೆ. ಅವರ ಬೇಡಿಕೆಗಳನ್ನು ಜಾರಿಗೆ ತರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ್ದರು. ಅದನ್ನು ಜಾರಿಗೆ ತರುವುದಕ್ಕೆ ಏನಾದರೂ ಪ್ರಯತ್ನ ಮಾಡುತ್ತಾರೆಯೇ ಎಂದು ಕೇಳುತ್ತಿದ್ದೇನೆ.

+ಶ್ರೀ ಹೆಚ್.ಕೆ. ಪಾಟೀಲ್ : ಈಗಾಗಲೇ ಸ್ಪಷ್ಟಪಡಿಸಿದ ಹಾಗೆ ಕೆಹೆಚ್ಡಿಸಿ ಅವರು ನೂಲನ್ನು ಕೊಡುವುದರಲ್ಲಿ ಸ್ವಲ್ಪ ತೊಂದರೆಗೆ ಬಂದಿದ್ದಾರೆ. ನಮ್ಮ ರಾಜ್ಯದಲ್ಲಿ 80 ಸಾವಿರಕ್ಕಿಂತ ಹೆಚ್ಚು ನೇಕಾರರು ಇದ್ದಾರೆ. ಅದರಲ್ಲಿ 25 ಸಾವಿರದಷ್ಟು ನೇಕಾರರನ್ನು ಕೆಹೆಚ್ಡಿಸಿ ತನ್ನ ವ್ಯಾಪ್ತಿಯಲ್ಲಿ ತೆಗೆದುಕೊಂಡು ಅವರಿಗೆ ನೂಲನ್ನು ಇವತ್ತು ಪೂರೈಕೆ ಮಾಡುತ್ತಿದ್ದಾರೆ. ಸುಮಾರು ಹತ್ತು ಸಾವಿರದಷ್ಟು ನೇಕಾರರು ಕೈಮಗ್ಗ ಸಹಕಾರಿ ಸಂಘಗಳ ವ್ಯಾಪ್ತಿಯಲ್ಲಿರುವುದರಿಂದ ಆ ಸಹಕಾರಿ ಸಂಘಗಳು ಆ ನೂಲನ್ನು ಪೂರೈಕೆ ಮಾಡುತ್ತಿದ್ದಾರೆ. ಉಳಿದ ನೇಕಾರರೆಲ್ಲರು ಎಲ್ಲಾ ಇವತ್ತು ಮಾಸ್ಟರ್ ವೀವರ್ಸ್ ಹತ್ತಿರ ಇಲ್ಲವೇ ತಾವು ಸ್ವಯಂ ಉದ್ಯೋಗ ಮಾಡತಕ್ಕ ಸಂದರ್ಭ ಇದೆ. ಸರ್ಕಾರ ಮೂಲಭೂತವಾಗಿ ಈ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಿರುವ ಕಾರಣ ನೇಕಾರರಿಗೆ ಸತತವಾಗಿ ಉದ್ಯೋಗ ಕೊಡಬೇಕು ಎಂದು. ಕನಿಷ್ಠ 25 ದಿವಸ ಉದ್ಯೋಗ ಕೊಡಬೇಕೆಂದು ಹೇಳಿ ನಾವು ಸರ್ಕಾರದವರು ಕೆಹೆಚ್ಡಿಸಿ ಅವರಿಗೆ ಸ್ಪಷ್ಟವಾಗಿರತಕ್ಕ ನಿರ್ದೇಶನವನ್ನು ನೀಡಿದ್ದೇವೆ. ಸ್ವಲ್ಪ ದಿನಗಳವರೆಗೆ ಸರಿಯಾಗಿಯೂ ನಡೆದಿದ್ದು ನಿಜ. ಆದರೆ 38 ಕೋಟಿ ರೂಪಾಯಿಯ ಬಟ್ಟೆ ಗೋಡೌನಿನಲ್ಲಿ ಶೇಖರಣೆ ಆಗಿರುವ ಕಾರಣ ಅದಕ್ಕೆ ಆರ್ಥಿಕವಾಗಿ ತೊಂದರೆಗೆ ಬಂದಿದೆ. ವಿರೋಧ ಪಕ್ಷದ ನಾಯಕರು ಸಣ್ಣ ಕೈಗಾರಿಕೆಯ ಸಚಿವರೂ ಆಗಿದ್ದರು. ಅವರಿಗೆ ಈ ಒಂದು ಕಾರ್ಪೊರೇಷನ್ ಬಗ್ಗೆ ಸಾಕಷ್ಟು ಗೊತ್ತಿದೆ. ಅವರದೂ ಮೇಲಿಂದ ಮೇಲೆ ಪ್ರಸ್ತಾಪ ಮಾಡುತ್ತಿರುತ್ತಾರೆ. ಸರ್ಕಾರದ ಮೇಲೆ ಅವಲಂಬಿತ ಇಲ್ಲದ ಹಾಗೆ ಈ ನಿಗಮ ಸ್ವಯಂ ನಡೆಯುವಂತೆ ಆದಾಗ ಮಾತ್ರ ನೇಕಾರರ ಪರಿಸ್ಥಿತಿ ಸುಧಾರಿಸುವುದಕ್ಕೆ ಸಾಧ್ಯ ಇದೆ. ನೇಕಾರರಿಗೆ ನಾವು ನೂಲನ್ನು ಸತತವಾಗಿ ಕೊಡುವುದಕ್ಕೆ ಸಾಧ್ಯ ಇದೆ. ಯಾವುದೋ ಒಂದು ಪ್ರಸಂಗದಲ್ಲಿ ಸರ್ಕಾರ ಎರಡು ಕೋಟಿ ರೂಪಾಯಿಗಳನ್ನು ಕೊಡಬೇಕು ಎನ್ನುವ ಉದ್ದೇಶದಿಂದ ನೇಕಾರರಿಗೆ ನಾವು ನೂಲು ಕೊಡತಕ್ಕದ್ದು ನಿಧಾನ ಆದರೆ ಕೆಹೆಚ್ಡಿಸಿ ಉದ್ದೇಶ ಸಫಲ ಆಗುವುದಕ್ಕೆ ಸಾಧ್ಯ ಇಲ್ಲ. ತಮ್ಮ ಮುಖೇನ ಈ ಸಂದರ್ಭದಲ್ಲಿ ಹೇಳುವುದು ಇಷ್ಟೆ. ಕೆಹೆಚ್ಡಿಸಿ ಅವರು ಸರ್ಕಾರಕ್ಕೆ ಏನು ಹೆಚ್ಚು ಜವಾಬ್ದಾರಿಯನ್ನು ಹಾಕುತ್ತಿದ್ದಾರೆ ಅಥವಾ ಇವರಿಂದ ಅನುದಾನವನ್ನಾಗಲೀ ಅಥವಾ ಸಹಾಯವನ್ನು ಅಪೇಕ್ಷೆ ಮಾಡುತ್ತಿದ್ದಾರೆ. ಅದಕ್ಕಿಂತ ಹೆಚ್ಚಿಗೆ ತಮ್ಮ ರಿರ್ಸೋರ್ಸನ್ ಅನ್ನು ತಾವು ಮೊಬಿಲೈಸ್ ಮಾಡಿಕೊಳ್ಳಬೇಕು. 38 ಕೋಟಿ ರೂಪಾಯಿ ಬೆಲೆ ಬಾಳತಕ್ಕಂಥ ಬಟ್ಟೆ ಗೋಡೌನ್ನಲ್ಲಿ ಶೇಖರಣೆ ಇಟ್ಟುಕೊಂಡು ಸರ್ಕಾರಕ್ಕೆ ಪ್ರತಿಯೊಂದು ಹಂತದಲ್ಲೂ ನೋಡುವುದಾದರೆ, ತಾವು ಸರ್ಕಾರಕ್ಕೇ ಕೈ ಮಾಡಿ ತೋರಿಸಿದರೆ ಅದು ಒಂದು ಕಾರ್ಪೊರೇಷನ್ ಯಾವ ರೀತಿ ನಡೆಯಬೇಕೆಂದು ನಾವು ಅಪೇಕ್ಷೆ ಮಾಡುತ್ತೇವೆ, ನೀವು ಅಪೇಕ್ಷೆ ಮಾಡುತ್ತೀರಿ ಅದರಂತೆ ಆಗುವುದಕ್ಕೆ

ಸಾಧ್ಯ ಇಲ್ಲ. ಅದಕ್ಕಾಗಿ ನಾನು ನಿಗಮದ ಛೇರ್ಮನ್ ಆದ ಸನ್ಮಾನ್ಯ ತಿಮ್ಮಾಪುರ್ ಅವರ ಜೊತೆಯಲ್ಲಿ ವಿವರವಾಗಿ ಚರ್ಚೆ ಮಾಡಿದ್ದೇನೆ. ಬರುವ ದಿವಸಗಳಲ್ಲಿ ಇನ್ನೂ ಹೆಚ್ಚು ಕೆಹೆಚ್ಡಿಸಿ ಅವರು ತಮ್ಮ ರಿಸೋರ್ಸನ್ ಅನ್ನು ಮೊಬಿಲೈಸ್ ಮಾಡಿಕೊಂಡು ವ್ಯವಹಾರಿಕ ಸಂಸ್ಥೆ ಎಂದು ಹೇಳಿ ಬಿಸಿನೆಸ್ ಆರ್ಗನೈಸೇಷನ್ ನಡೆದ ಹಾಗೆ ನಡೆಯುವಂತೆ ಅಲ್ಲಿರತಕ್ಕ ಎಲ್ಲ ಅಧಿಕಾರಿಗಳ ಮನೋಭಾವ ಸಹಿತ ಬದಲಾವಣೆ ಆಗಿ ಆ ದಿಸೆಯೊಳಗೆ ಕಾರ್ಯಕ್ರಮ ಹಾಕಿಕೊಳ್ಳಬೇಕೆನ್ನುವಂತಹದ ಬಗ್ಗೆ . ಒಂದು ಸ್ಪಷ್ಟ ನಿರ್ಣಯ, ನಿಲುವನ್ನು ಸರ್ಕಾರದವರು ಅವರಿಗೆ ತಿಳಿಸಿದ್ದೇವೆ. ನನಗೆ ಅನಿಸುತ್ತದೆ. ಇವತ್ತು ಏನು ಸಮಸ್ಯೆ ಇದೆ, ಅದು ಬರುವ ಇನ್ನು ಎರಡು ಮೂರು ತಿಂಗಳಲ್ಲಿ ಉಲ್ಬಣಗೊಳ್ಳುವ ಎಲ್ಲ ಸಾಧ್ಯತೆಗಳು ಇವೆ. ಕಾರಣ ಇಷ್ಟೇ. ಇವತ್ತು ಜೈಧರ್ ಹತ್ತಿ ಸಹಿತ, ಡಿಸಿಹೆಚ್ ಹತ್ತಿಗಿಂತ ಜಾಸ್ತಿ ರೇಟ್ ಆಗಿದೆ. ಕ್ವಿಂಟಾಲ್ಗೆ 1500 ಆಗಿದೆ. ಅದು 20 ಕೌಂಟಿಗೆ ಬರತಕ್ಕ ಹತ್ತಿ 1500 ಆದಾಗ ಸಹಕಾರಿ ನೂಲಿನ ಗಿರಣಿ ಇರಲಿ, ಖಾಸಗಿ ನೂಲಿನ ಗಿರಣಿ ಇವು ನಮಗೆ 20 ಕೌಂಟ್, 40 ಕೌಂಟ್ ಯಾರನ್ ಸಹಿತ ಕೊಡುವಂತಹದು ಬಹಳ ದುಸ್ತರವಾಗಿರತಕ್ಕ ಪರಿಸ್ಥಿತಿಯ ಹಿನ್ನೆಲೆಯೊಳಗೆ ನನ್ನ ಒಂದು ಸಲಹೆಯನ್ನು ಹಾಗೂ ನನ್ನ ಸರ್ಕಾರದ ನಿರ್ದೇಶನವನ್ನು ನಾನು ಕೆಹೆಚ್ಡಿಸಿ ಅವರಿಗೆ ಕೊಡುತ್ತೇನೆ. ಏನೇ ಸಮಸ್ಯೆ ಇದ್ದರೂ ಸಹಿತ ತಕ್ಷಣ ನೂಲು ಪೂರೈಕೆಯನ್ನು ನಾವು ಈಗಾಗಲೇ ನಿರ್ಣಯಿಸಿದಂತೆ 25 ದಿನ ಕೊಡುವ ಹಾಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಈ ರೀತಿಯಾದ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಸನ್ಮಾನ್ಯ ಕೌಜಲಗಿಯವರು ಪ್ರಸ್ತಾಪ ಮಾಡಿದಂತೆ. ಅಲ್ಲಿ ದಾದಾ ಸಾಬ್ ಭಾಂಗಿಯವರು ಉಪವಾಸ ಕುಳಿತದ್ದು ನಿಜ. ವೀರಪ್ಪ ಗೌರನಲ್ಲಾ ಅವರು ಬಾಂಕಿ ನಗರದಲ್ಲಿ ಉಪವಾಸ ಕುಳಿತಿದ್ದು ನಿಜ. ಆಗ ಮಾನ್ಯ ಮುಖ್ಯಮಂತ್ರಿಗಳು, ಬಿ.ಎಸ್. ಪಾಟೀಲ್, ಬಿಜಾಪುರ ಜಿಲ್ಲಾ ಸಚಿವರು ನಾನು ಹಾಗೂ ಸನ್ಮಾನ್ಯ ತಿಮ್ಮಾಪ್ಪೂರ್ ಹೀಗೆ ಎಲ್ಲರೂ ಅವರನ್ನು ಭೇಟಿಯಾಗಿ ಅವರ ಮನವೊಲಿಸಿ ಅವರನ್ನು ಉಪವಾಸ ಬಿಡಬೇಕೆಂದು ಕೇಳಿದ್ದೆವು. ಅನಂತರ ಸಹಿತ ನಮ್ಮ ಕೆಲವು ಮಗ್ಗಗಳು ನಿಂತಿರಬಹುದು, ಬರುವ ದಿನಗಳಲ್ಲಿ ಆ ಸಮಸ್ಯೆಯನ್ನು ಬಗೆಹರಿಸುತ್ತೇವೆ. ಸನ್ಮಾನ್ಯ ಬನ್ನಿಕೋಡ್ರವರು ತುಂಬಿನಕಟ್ಟೆ, ಗದಗ್, ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಗದಗ್ನಲ್ಲಿ ಪಾಲಿಯಸ್ಟರ್ ಯಾರನ್ ಅನ್ನು ಪೂರೈಕೆ ಮಾಡುತ್ತಿದ್ದಾರೆ. ಅಲ್ಲೂ ಸಹಿತ ತೊಂದರೆಯಾಗಿದ್ದು ಅದನ್ನು ನಾವು ಕಡಿಮೆಗೊಳಿಸುವುದಕ್ಕೆ ಕ್ರಮಕೈಗೊಳ್ಳುತ್ತೇವೆ. ಇದರ ಬಗ್ಗೆ ಸನ್ಮಾನ್ಯ ಯಡಿಯೂರಪ್ಪನವರು ನನಗೆ ಪತ್ರ ಬರೆದಿದ್ದರು. ಈ ಸಂದರ್ಭದಲ್ಲಿ ಭಾಂಗಿ ವರದಿಯನ್ನು ಜಾರಿಗೆ ತರಬೇಕೆಂಬ ಪ್ರಸ್ತಾಪ ಮಾಡಿದರು. ಟೆಕ್ಸ್ಟೈಲ್ ಕಮೀಷನರ್ ಆಗಿದ್ದ ಶ್ರೀ ಗೋಕುಲ್ರಾಂ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತ್ತು. ನೇಕಾರರಿಗೆ ಏನು ಅನುಕೂಲಗಳನ್ನು ಕೊಡಬಹುದು ಎನ್ನುವುದರ ಬಗ್ಗೆ ಸಮಿತಿಯನ್ನು ನೇಮಿಸಿತ್ತು. ಆ ಸಮಿತಿಯಲ್ಲಿ ಭಾಂಗಿಯವರು ಸದಸ್ಯರಾಗಿ ಕೆಲಸ ಮಾಡಿದರು. ಅಲ್ಲಿ ಅವರದೇ ಆದಂತಹ ಕೆಲವು ವಿಚಾರಗಳನ್ನು ವ್ಯಕ್ತ ಮಾಡಿದ್ದಾರೆ. ಇವತ್ತು ಹೊಸದಾಗಿ ಜವಳಿ ನೀತಿಯನ್ನು ಏನು ಘೋಷಣೆ ಮಾಡಿದ್ದೇವೆ. ಆ ನೀತಿಯಲ್ಲಿ ನಾವು ಹಾಕಿಕೊಂಡಿರುವಂತಹ ಕಾರ್ಯಕ್ರಮಗಳಲ್ಲಿ ಬಹುಶಃ ಅವರು ವ್ಯಕ್ತಪಡಿಸಿರತಕ್ಕಂಥ ಒಂದು ಅಂಶವನ್ನು ಬಿಟ್ಟರೆ ಅನ್-ಎಂಪ್ಲಾಯಮೆಂಟ್ ವೇಜ್ ಕೊಡಬೇಕು ಎನ್ನುವಂಥ ಒಂದು ಮಾತು ಏನು ಇದೆ, ಮತ್ತು ಆ ಒಂದು ಅಭಿಪ್ರಾಯವೇನು ಇದೆ. ಅದು ಒಂದನ್ನು ಬಿಟ್ಟು ಉಳಿದ ಎಲ್ಲಾ ಅನುಕೂಲಕರವಾದಂತಹ ಹಾಗೂ ಅವರ ಕಲ್ಯಾಣ ಮಾಡುವಂತಹ ಕಾರ್ಯಕ್ರಮಗಳನ್ನು ಆ ನೀತಿಯ ಮುಖಾಂತರ ಹಾಕಿಕೊಳ್ಳಲಾಗಿದೆ ಎನ್ನುವುದನ್ನು ಸನ್ಮಾನ್ಯ ಯಡಿಯೂರಪ್ಪನವರ ಗಮನಕ್ಕೆ ತರುತ್ತಾ, ಬರುವ ದಿವಸಗಳಲ್ಲಿ ಈ ಸಮಸ್ಯೆ ಹತೋಟಿಗೆ ಬರುವ ಹಾಗೆ ಈ ನೇಕಾರರ ತೊಂದರೆ ಏನಿದೆ ಅದನ್ನು ಕನಿಷ್ಟಗೊಳಿಸತಕ್ಕಂಥ ಕಾರ್ಯಕ್ರಮವನ್ನು ರೂಪಿಸುತ್ತೇವೆ.

(ಗೊಂದಲ)

ಶ್ರೀ ಪಿ.ಸಿ. ಸಿದ್ಧನಗೌಡ : ನಾನು ಬರೆದು ಕೇಳಿದ್ದೇನೆ. 38 ಕೋಟಿ ರೂಪಾಯಿಗಳ ಬಟ್ಟೆಯನ್ನು ಯಾವಾಗ ರಿಲೀಜ್ ಮಾಡುತ್ತೀರಿ, ಎನ್ನುವುದನ್ನು ಜವಳಿಖಾತೆಯ ಸಚಿವರನ್ನು ತಮ್ಮ ಮುಖಾಂತರ ಕೇಳುತ್ತೇನೆ. ಈ 38 ಕೋಟಿ ರೂಪಾಯಿಗಳ ಬಟ್ಟೆಯನ್ನು ದಾಸ್ತಾನು ಇಟ್ಟಿದ್ದೆಯೆಂದು ಹೇಳಿದರು. ಅದನ್ನು ಯಾವಾಗ ರಿಲೀಜ್ ಮಾಡುತ್ತೀರಿ ಅಥವಾ ಅದನ್ನು ಸಬ್ಸಿಡಿ ಮೇಲೆ ಬಟ್ಟೆ ಕೊಟ್ಟರೆ ನಡೆಯುತ್ತದೆ. ಇದು ಒಂದು ಕ್ಲಾರಿಫಿಕೇಷನ್ ಕೇಳಿದ್ದೇನೆ, ನಾನು ಡಿಟೈಲ್ ಆಗಿ ಹೋಗಿಲ್ಲ. ಈ ಎರಡು ಪಾಯಿಂಟ್ಗಳನ್ನು ಕೇಳಿದ್ದೇನೆ. ಈಗ 38 ಕೋಟಿ ರೂಪಾಯಿಗಳ ದಾಸ್ತಾನು ಏನು ಇಟ್ಟಿದ್ದಾರೆ ಅದನ್ನು ಅವರು ಯಾವಾಗ ರಿಲೀಜ್ ಮಾಡುತ್ತಾರೆ. ಅದನ್ನು ಸಬ್ಸಿಡಿ ಮೇಲೆ ಕೊಟ್ಟರೆ ಆ ಸಂಸ್ಥೆ ಬದುಕುತ್ತದೆ. ಎರಡನೆಯದು ಜವಳಿ ಸಚಿವರ ಕ್ಷೇತ್ರದಲ್ಲಿ ನೇಕಾರರಿಗೆ ಕೊಟ್ಟಂತಹ ನೂಲಿನ ಬಗ್ಗೆ ಅನೇಕ ಪತ್ರಿಕೆಗಳಲ್ಲಿ ಬಂದಿದ್ದು, ಅವರು ಧರಣಿಗೆ ಕುಳಿತಿದ್ದರೂ ಅವರಿಗೆ ಪೇಮೆಂಟ್ ಬಂದಿಲ್ಲ. ಈ ಎರಡರ ಬಗ್ಗೆ ಸಚಿವರು ಹೇಳಬೇಕು. ಈ 38 ಕೋಟಿ ರೂಪಾಯಿಗಳ ದಾಸ್ತಾನನ್ನು ಬಿಡುಗಡೆ ಮಾಡುವುದಕ್ಕೆ ತಾವು ಯಾವಾಗ ತೀರ್ಮಾನ ತೆಗೆದುಕೊಳ್ಳುತ್ತೀರಿ. ಸಬ್ಸಿಡಿ ಮೇಲೆ ಅಥವಾ ಬೇರೆ ಯಾವುದೇ ರೂಪದಲ್ಲಿ ಆ ಬಟ್ಟೆ ಮಾರಾಟ ಲಾಸ್ ಆಗುವುದಿಲ್ಲ. ನೀವು ಲೇಟ್ ಮಾಡಿದರೆ ಲಾಸ್ ಆಗುತ್ತದೆ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ಸಿದ್ಧನಗೌಡರು ನಾನು ಹೇಳಿದ್ದನ್ನು ಕೇಳಿಸಿ ಕೊಳ್ಳಲಿಲ್ಲ ಎಂದು ಕಾಣಿಸುತ್ತದೆ. ಈ ಕಾರ್ಪೊರೇಷನ್ಗಳು ವ್ಯವಹಾರಕ್ಕಾಗಿ ಬಿಸಿನೆಸ್ ಆರ್ಗನೈಜೇಷನ್ ನಡೆದ ಹಾಗೆ ನಡೆದರೆ ಈ ಸಮಸ್ಯೆ ಬರುವುದಿಲ್ಲ. ಇವತ್ತು 38 ಕೋಟಿ ರೂಪಾಯಿ ಸರ್ಕಾರದ ನಿಗಮದಲ್ಲಿ ಇಟ್ಟುಕೊಂಡು ಕುಳಿತರೆ ಅದು ನಮ್ಮ ಕಾರ್ಪೊರೇಷನ್ ದಕ್ಷತೆಯನ್ನು ತೋರಿಸುತ್ತದೆ. ಇದು ತೀವ್ರವಾಗಿ ಕಡಿಮೆ ಆಗಬೇಕು. ಬಹಳ ಅಂದರೆ 5 ಕೋಟಿ ಇರಬಹುದು. 10 ಕೋಟಿ ರೂಪಾಯಿಗಳವರೆಗೆ ನಾವು ಮಾರ್ಜಿನ್ ಕೊಡಬಹುದು. ಅದಕ್ಕೆ ಈರೋಡ್ನಂಥ ಸಂತೆಯೊಳಗೆ ಸಹಿತ ಹೋಗಿ ಮಾರಬೇಕೆಂದು ಆದೇಶ ನೀಡಿದ್ದೇವೆ. ನಿಮಗೆ ಗೊತ್ತಿರುವ ಹಾಗೆ, ಜನತಾ ಬಟ್ಟೆಯನ್ನು ನಾವು ಟಿ.ಎ.ಪಿ.ಸಿ.ಎಂ.ಎಸ್. ಮತ್ತು ರೇಷನ್ಶಾಪ್ಗಳ ಮೂಲಕ ಮಾರಾಟ ಮಾಡುತ್ತೇವೆ. ಜನತಾ ಬಟ್ಟೆ ಅಷ್ಟು ಸರಿಯಾಗಿದ್ದರೂ ಸಹಿತ ಟಿ.ಎ.ಪಿ.ಸಿ.ಎಂ.ಎಸ್. ಇವತ್ತು ಸ್ಟಾಗ್ನೇಟ್ ಆಗಿರುವುದರಿಂದ ಅಲ್ಲೂ ಸಹಿತ ಹೋಲ್ಸೇಲ್ ಪಾಯಿಂಟ್ ಒಳಗೆ ಟೇಕ್ ಆಫ್ ಮಾಡುತ್ತಿಲ್ಲ, ರೇಷನ್ ಶಾಪ್ಗೆ ಮುಟ್ಟುತ್ತಿಲ್ಲ. ಇದೆಲ್ಲಾ ಆಂತರಿಕ ತೊಂದರೆಗಳಿರುವುದರಿಂದ ಈ ಒಂದು ಸಂಗ್ರಹ ಸಹಿತ ಜಾಸ್ತಿಯಾಗಿದೆ. ಈ ಸಂಗ್ರಹವನ್ನು ಕನಿಷ್ಟಗೊಳಿಸಿದಾಗ ಮಾತ್ರ ನಿಗಮದ ಆರೋಗ್ಯ ಸರಿಯಾಗುತ್ತದೆ. ಈ ದಿಶೆಯಲ್ಲಿ ಸೂಕ್ತವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಪರಿವಾರ ಜನಾಂಗದವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವುದರ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಪರಿಹಾರ ಜನಾಂಗದವರನ್ನು ಪರಿಶಿಷ್ಟ ವರ್ಗಕ್ಕೆ ಸೇರಿಸುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಮತ್ತು ಕಂದಾಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಈ ಸದನದ ಹಿರಿಯ ಸದಸ್ಯರಾದ ವಾಟಾಳ್ ನಾಗರಾಜ್ರವರು ಮೈಸೂರು ಜಿಲ್ಲೆಯಲ್ಲಿರತಕ್ಕ ಪರಿವಾರ ಜನಾಂಗದ ಬಗ್ಗೆ ಬಹಳಷ್ಟು ಸಾರಿ ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮಾರ್ಚಿ 18ನೇ ತಾರೀಖು ನಾನು ಅವರಿಗೆ ಉತ್ತರವನ್ನೂ